ಕರ್ನಾಟಕ ವಿಧಾನ ಸಭೆ

183 ಶ್ರೀ ವೆಂಕಟಶಿವಾರೆಡ್ಡಿ ಜಿ.ಕೆ. (ಶ್ರೀನಿವಾಸಪುರ)
ಇಂಧನ ಸಚಿವರು.

****

ಅ). ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತಕ್ಷೇತ್ರ ಹೋಳೂರು ಹೋಬಳಿಯಲ್ಲಿ 66 ಕೆ.ವಿ.ವಿದ್ಯುತ್ ಘಟಕ ಹೊಸದಾಗಿ ಸ್ಥಾಪಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ). ರೋಣೂರು, ರಾಯಲ್ಪಾಡ್ ಹೋಬಳಿಗೆ 66 ಕೆ.ವಿ. ವಿದ್ಯುತ್ ಘಟಕ ಸ್ಥಾಪನೆ ಸರ್ಕಾರದ ಗಮನದಲ್ಲಿ ಇದೆಯೇ?

ಇಲ್ಲ.

ಇ). ರೋಣೂರು ಮತ್ತು ರಾಯಲ್ಪಾಡ್ ಹೋಬಳಿಯ ಆಂಧ್ರಪ್ರದೇಶದ ಗಡಿ ಭಾಗದ ಮತ್ತು ಹಿಂದುಳಿದ ಪ್ರದೇಶವಾದುದರಿಂದ ಇಲ್ಲಿಯ ರೈತರಿಗೆ ವಿದ್ಯುತ್ ಪೂರೈಕೆಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಶ್ರೀನಿವಾಸಪುರ ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿರುವ ಸುತ್ತಮುತ್ತಲಿನ ಹಳ್ಳಿಗೆ ವಿದ್ಯುತ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ವಿದ್ಯುತ್ ಲಭ್ಯತೆಯನ್ನು ಆಧರಿಸಿ ಮತ್ತು ಸರ್ಕಾರದ ಆದೇಶದ ಪ್ರಕಾರ ಗ್ರಾಮೀಣ ಭಾಗಗಳಿಗೆ ಪ್ರಸ್ತುತ 6 ಗಂಟೆಗಳ ಕಾಲ 3 ಪೇಸ್ ವಿದ್ಯುತ್ ಹಾಗೂ 6 ಗಂಟೆಗಳ ಕಾಲ ಸಿಂಗಲ್ ಪೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ. ನೀರಾವರಿ ಪಂಪುಸೆಟ್ಟುಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಹಳ್ಳಿಗಳಿಗೆ 24 ಗಂಟೆಗಳ ಕಾಲ ಸತತ ವಿದ್ಯುತ್ ಪೂರೈಸಲು ರಾಜ್ಯ ಸರ್ಕಾರವು **'ನಿರಂತರ ಜ್ಯೋತಿ'** ಯೋಜನೆಯನ್ನು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಮಾಸ್ತಿಯಲ್ಲಿ ಜಾರಿಗೆ ತಂದಿದೆ. ಅದರಂತೆ ಮುಂಬರುವ ವರ್ಷಗಳಲ್ಲಿ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ನಿರಂತರ ಜ್ಯೋತಿ ಯೋಜನೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕರ್ನಾಟಕ ಸರ್ಕಾರವು ದಿನಾಂಕ 17–12–2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್

11ರ ಅನ್ವಯ ತಾವು ಉತ್ಪಾದಿಸುವ ಗರಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.

2. ಕರ್ನಾಟಕ ಸರ್ಕಾರವು ದಿನಾಂಕ 30–12–2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್‌ನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.

3. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ.

ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್–2008 ರಿಂದ ಜನವರಿ–2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಕರ್ನಾಟಕ ಸರ್ಕಾರವು 350 ಕೋಟಿ ರೂ.ಗಳನ್ನು ನೀಡಿದ್ದು, ಮಿಕ್ಕ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುತ್ತವೆ.

ಸಂಖ್ಯೆ: ಇಎನ್ 17 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

184 ಶ್ರೀ ವೆಂಕಟಶಿವಾರೆಡ್ಡಿ ಜಿ.ಕೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ). ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತಕ್ಷೇತ್ರದಲ್ಲಿ ಸರ್ಕಾರಿ ಜೂನಿಯರ್ ಕಾಲೇಜುಗಳ ಸಂಖ್ಯೆ ಎಷ್ಟು (ವಿವರ ನೀಡುವುದು).

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರದಲ್ಲಿ 07 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇವೆ. ಕಾಲೇಜಿನ ವಿವರಗಳು ಕೆಳಕಂಡಂತಿವೆ.

1) ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ.
2) ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ.
3) ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಯಲಪಾಡು.
4) ಸರ್ಕಾರಿ ಪದವಿ ಪೂರ್ವ ಕಾಲೇಜು, ದಳಸನೂರು.
5) ಸರ್ಕಾರಿ ಪದವಿ ಪೂರ್ವ ಕಾಲೇಜು, ಗೋಣಿಪಲ್ಲಿ.
6) ಸರ್ಕಾರಿ ಪದವಿ ಪೂರ್ವ ಕಾಲೇಜು, ಸೋಮಯಾಜಲಹಳ್ಳಿ.
7) ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾದನಹಳ್ಳಿ ಕ್ರಾಸ್.